# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1128
ಸದಸ್ಯರ ಹೆಸರು : ಶ್ರೀ ಹೆಚ್.ಎಸ್. ಗೋಪಿನಾಥ್.
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 18.12.2024.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಇರುವ ಒಟ್ಟು ಬಸ್‌ಗಳ ಸಂಖ್ಯೆ ಎಷ್ಟು; (ಡೀಸೆಲ್ ಹಾಗೂ ವಿದ್ಯುತ್ ಚಾಲಿತ ಬಸ್ಸುಗಳ ವಿವರ ನೀಡುವುದು)</td><td>ಬೆಂ.ಮ.ಸಾ.ಸಂಸ್ಥೆಯಲ್ಲಿ ದಿನಾಂಕ: 05.12.2024 ರಂತೆ ಒಟ್ಟು 6639 ಬಸ್‌ಗಳಿದ್ದು, ಅವುಗಳು ಈ ಕೆಳಗಿನಂತಿವೆ.
<table>
<tr><th colspan="2">ಬೆಂ.ಮ.ಸಾ.ಸಂಸ್ಥೆ ಬಸ್‌ಗಳು</th></tr>
<tr><td>ಡೀಸೆಲ್ ಬಸ್‌ಗಳು</td><td>5398</td></tr>
<tr><td>ಜಿ.ಸಿ.ಸಿ. ಆಧಾರದ ಎಲೆಕ್ಟ್ರಿಕ್ ಬಸ್‌ಗಳು</td><td>1241</td></tr>
<tr><td>ಒಟ್ಟು</td><td>6639</td></tr>
</table></td></tr>
<tr><td>ಆ)</td><td>ಈ ಸಂಸ್ಥೆಯಲ್ಲಿ ಅನುಪಯುಕ್ತಗೊಂಡಿರುವ ಬಸ್ಸುಗಳ ಒಟ್ಟು ಸಂಖ್ಯೆ ಎಷ್ಟು; ಅನುಪಯುಕ್ತಗೊಂಡಿರುವ ಬಸ್‌ಗಳ ವಿಲೇವಾರಿ ಮಾಡಲು ಇಲಾಖೆಯು ಯಾವ ಕ್ರಮಗಳನ್ನು ಕೈಗೊಂಡಿದೆ;</td><td>2024-25ನೇ ಸಾಲಿನಲ್ಲಿ ಬೆಂ.ಮ.ಸಾ. ಸಂಸ್ಥೆಯು ದಿನಾಂಕ:05.12.2024 ರಂತೆ ಒಟ್ಟು 612 ಬಸ್ಸುಗಳನ್ನು ಅನುಪಯುಕ್ತಗೊಳಿಸಲಾಗಿರುತ್ತದೆ.<br>ಅನುಪಯುಕ್ತಗೊಂಡಿರುವ ಬಸ್‌ಗಳ ವಿಲೇವಾರಿ ಮಾಡಲು ಇಲಾಖೆಯು ಕೈಗೊಳ್ಳುವ ಕ್ರಮಗಳು:<br>ತಾಂತ್ರಿಕ ಶಾಖೆಯಿಂದ ಅನುಪಯುಕ್ತಗೊಂಡ ವಾಹನಗಳನ್ನು ಆರ್.ಟಿ.ಒ. ರವರಿಂದ ನೊಂದಣಿ ಸಂಖ್ಯೆಯನ್ನು ರದ್ದುಪಡಿಸಿ, ನಂತರ ಸದರಿ ನಿರುಪಯುಕ್ತ ವಾಹನಗಳ ಹರಾಜು ಪ್ರಕ್ರಿಯೆ ಮಾಡಲು ಭಾರತ ಸರ್ಕಾರದ ಅಧೀನ ಸಂಸ್ಥೆಯಾದ M/s. Metal Scrap Trade Corporation (ಮೆ// ಎಂ.ಎಸ್.ಟಿ.ಸಿ) ಮೂಲಕ ಇ-ಹರಾಜು ಪ್ರಕ್ರಿಯೆ ಕೈಗೊಂಡು H-1 ಬಿಡ್ಡುದಾರರಿಗೆ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ.</td></tr>
<tr><td>ಇ)</td><td>2024ನೇ ಸಾಲಿನಲ್ಲಿ ಸಾರಿಗೆ ಸಂಸ್ಥೆಯಿಂದ ಎಷ್ಟು ಹೊಸ ಬಸ್‌ಗಳನ್ನು (ಡೀಸೆಲ್ ಹಾಗೂ ವಿದ್ಯುತ್ ಚಾಲಿತ) ಖರೀದಿಸಲು ಒಪ್ಪಿಗೆ ನೀಡಲಾಗಿದೆ? (ವಿವರ ನೀಡುವುದು)</td><td>ಬೆಂ.ಮ.ಸಾ.ಸಂಸ್ಥೆಯಲ್ಲಿ 2024-25ನೇ ಸಾಲಿನಲ್ಲಿ ಹೊಸ 820 ಬಿ.ಎಸ್.-6 ಮಾದರಿಯ ಡೀಸೆಲ್ ಬಸ್ಸುಗಳನ್ನು ಖರೀದಿಸಲು ಆದೇಶ ನೀಡಿದ್ದು, ಅದರಂತೆ ಇಲ್ಲಿಯವರೆಗೆ 551 ಬಸ್ಸುಗಳು ಸರಬರಾಜು ಆಗಿದ್ದು, ಉಳಿದ 269 ಬಸ್ಸುಗಳು ಜನವರಿ-2025 ರೊಳಗೆ ಸರಬರಾಜು ಆಗಲಿದೆ ಹಾಗೂ ಫೇಮ್-2 ಯೋಜನೆಯಡಿಯಲ್ಲಿ 921 ಹವಾನಿಯಂತ್ರಣ ರಹಿತ ವಿದ್ಯುತ್ ಚಾಲಿತ ಬಸ್ಸುಗಳಲ್ಲಿ 851 ಬಸ್ಸುಗಳು ಜಿಸಿಸಿ ಮಾದರಿಯಲ್ಲಿ ಕಾರ್ಯಾಚರಣೆಯಾಗುತ್ತಿದ್ದು, ಉಳಿದ 70 ಬಸ್ಸುಗಳು ಪ್ರಸ್ತುತ ಸಾಲಿನಲ್ಲಿ ಕಾರ್ಯಚರಣೆಯಾಗಲಿವೆ ಮತ್ತು 320 ಹವಾನಿಯಂತ್ರಿತ ವಿದ್ಯುತ್ ಚಾಲಿತ ಬಸ್ಸುಗಳನ್ನು ಜಿಸಿಸಿ ಮಾದರಿಯಲ್ಲಿ ಪ್ರಸ್ತುತ ಸಾಲಿನಲ್ಲಿ ಕಾರ್ಯಚರಣೆಗೊಳಿಸಲಾಗುವುದು.</td></tr>
</table>

**ಸಂಖ್ಯೆ: ಟಿಡಿ 252 ಟಿಸಿಕ್ಯೂ 2024**

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು